# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1057 |
| ಸದಸ್ಯರ ಹೆಸರು | ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 20.08.2025 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಒಟ್ಟು ಎಷ್ಟು ನಾಡಕಛೇರಿಗಳು ಕಾರ್ಯ ನಿರ್ವಹಿಸುತ್ತಿವೆ ಹಾಗೂ ಪ್ರಸ್ತುತ ಎಲ್ಲಾ ಕಛೇರಿಗಳಲ್ಲಿ ತಹಶೀಲ್ದಾರ್ ಗಳನ್ನು ನೇಮಿಸಲಾಗಿದೆಯೇ; (ಅಧಿಕಾರಿಗಳ ಹೆಸರು ಮತ್ತು ನೇಮಕಗೊಂಡಿರುವ ದಿನಾಂಕದ ಮಾಹಿತಿ ಒದಗಿಸುವುದು) | ರಾಜ್ಯದಲ್ಲಿ ಒಟ್ಟು 771 ನಾಡಕಛೇರಿಗಳು ಕಾರ್ಯನಿರ್ವಹಿಸುತ್ತಿವೆ ಹಾಗೂ ರಾಜ್ಯದ ಎಲ್ಲಾ ನಾಡಕಛೇರಿಗಳಲ್ಲಿ ಉಪ ತಹಶೀಲ್ದಾರ್‌ಗಳನ್ನು ನೇಮಿಸಲಾಗಿರುತ್ತದೆ. ನಾಡಕಛೇರಿಗಳಲ್ಲಿ ತಹಶೀಲ್ದಾರ್ ಹುದ್ದೆ ಇರುವುದಿಲ್ಲ. |
| (ಆ) | ಸಾರ್ವಜನಿಕರಿಗೆ ನಾಡಕಛೇರಿಯಲ್ಲಿ ಯಾವ ಯಾವ ಸೇವೆಗಳು ಲಭ್ಯತೆ ಇದೆ (ಪೂರ್ಣ ವಿವರ) ಸಾರ್ವಜನಿಕರು ಪ್ರತಿ ಸೇವೆಗೆ ಸಲ್ಲಿಸಬೇಕಾಗಿರುವ ದಾಖಲೆಗಳು ಯಾವುವು; (ಪ್ರತ್ಯೇಕವಾದ ಮಾಹಿತಿ ನೀಡುವುದು) | ಸಾರ್ವಜನಿಕರಿಗೆ ನಾಡಕಛೇರಿಯಲ್ಲಿ 42 ಸೇವೆಗಳನ್ನು ಒದಗಿಸಲಾಗುತ್ತಿದೆ. ವಿವರಗಳನ್ನು **ಅನುಬಂಧ-1**ರಲ್ಲಿ ನೀಡಿದೆ.<br>ಸಾರ್ವಜನಿಕರು ನಾಡ ಕಛೇರಿಗಳಲ್ಲಿ ಒದಗಿಸಲಾಗುವ ಸೇವೆಗಳನ್ನು ಪಡೆಯಲು ಸಲ್ಲಿಸಬೇಕಾಗಿರುವ ದಾಖಲೆಗಳ ಮಾಹಿತಿಯನ್ನು **ಅನುಬಂಧ-2** ರಲ್ಲಿ ನೀಡಿದೆ. |
| (ಇ) | ಬೆಂಗಳೂರು ಉತ್ತರ ತಾಲ್ಲೂಕು ಮತ್ತು ದಕ್ಷಿಣ ತಾಲೂಕಿನಲ್ಲಿರುವ ಎಲ್ಲಾ ನಾಡಕಛೇರಿಯಲ್ಲಿ ಒಂದು ವರ್ಷದ ಅವಧಿಯಲ್ಲಿ ವಂಶವೃಕ್ಷಕ್ಕಾಗಿ ಎಷ್ಟು ಅರ್ಜಿಗಳು ಬಂದಿದೆ; ಬಂದಿರುವ ಅರ್ಜಿಗಳಲ್ಲಿ ಎಷ್ಟು ಅರ್ಜಿಗಳಿಗೆ ಅನುಮತಿ ನೀಡಲಾಗಿದೆ; ಎಷ್ಟು ಅರ್ಜಿಗಳು ತಿರಸ್ಕೃತಗೊಂಡಿವೆ; (ಅರ್ಜಿಗಳೊಂದಿಗೆ ಸಲ್ಲಿಸಿರುವ ದಾಖಲೆಗಳ ಮಾಹಿತಿ ನೀಡುವುದು) | ಬೆಂಗಳೂರು ಉತ್ತರ ತಾಲ್ಲೂಕು ಮತ್ತು ದಕ್ಷಿಣ ತಾಲ್ಲೂಕಿನಲ್ಲಿರುವ ಎಲ್ಲಾ ನಾಡಕಛೇರಿಯಲ್ಲಿ ಒಂದು ವರ್ಷದ ಅವಧಿಯಲ್ಲಿ ವಂಶವೃಕ್ಷ ಕೋರಿ 52410 ಅರ್ಜಿಗಳು ಸ್ವೀಕೃತವಾಗಿರುತ್ತವೆ.<br>ಅವುಗಳಲ್ಲಿ 39427 ಅರ್ಜಿಗಳಿಗೆ ಪ್ರಮಾಣ ಪತ್ರವನ್ನು ಒದಗಿಸಲಾಗಿದ್ದು, 12331 ಅರ್ಜಿಗಳನ್ನು ವಂಶವೃಕ್ಷ ಪಡೆಯಲು ಸಲ್ಲಿಸಬೇಕಾಗಿರುವ ದಾಖಲೆಗಳನ್ನು ಒದಗಿಸಿರುವುದಿಲ್ಲವಾದ್ದರಿಂದ ತಿರಸ್ಕರಿಸಲಾಗಿರುತ್ತದೆ. ಇನ್ನುಳಿದ 652 ಅರ್ಜಿಗಳು ಪರಿಶೀಲನೆ ಹಂತದಲ್ಲಿರುತ್ತವೆ. |
| (ಈ) | ತಿರಸ್ಕಾರಗೊಳಿಸಲು ಕಾರಣಗಳೇನು; ಅರ್ಜಿ ಸಲ್ಲಿಸಿದ ನಂತರ ಎಷ್ಟು ದಿನದವರೆಗೂ ಸಾರ್ವಜನಿಕರು ಕಾಯಬೇಕಾಗುತ್ತದೆ; ಹಾಗೂ ಎಷ್ಟು ಬಾರಿ ಅರ್ಜಿ ತಿರಸ್ಕಾರಗೊಳಿಸಲು ಸರ್ಕಾರ ಅನುಮತಿಸಿದೆ; | ವಂಶವೃಕ್ಷ ಅರ್ಜಿಗಳನ್ನು ಈ ಕೆಳಕಂಡ ಕಾರಣಗಳಿಂದ ತಿರಸ್ಕರಿಸಲಾಗುತ್ತದೆ.<br>1. ವಿಳಾಸದ ದಾಖಲೆಗಳನ್ನು ಒದಗಿಸಿರುವುದಿಲ್ಲ<br>2. ಗುರುತಿನ ಚೀಟಿಯನ್ನು ಒದಗಿಸಿರುವುದಿಲ್ಲ<br>3. ಸಂಬಂಧಪಟ್ಟ ಗ್ರಾಮದಲ್ಲಿ/ವಿಳಾಸದಲ್ಲಿ ಅರ್ಜಿದಾರರು ವಾಸವಿರುವುದಿಲ್ಲ<br>4. ಕುಟುಂಬ ಸದಸ್ಯರ ಮಾಹಿತಿಯ ದಾಖಲೆಯನ್ನು ಒದಗಿಸಿರುವುದಿಲ್ಲ |

| | | |
|---|---|---|
| | | 5. ಉದ್ದೇಶವನ್ನು ನಮೂದಿಸಿರುವುದಿಲ್ಲ<br>6. ಮೃತ ಕುಟುಂಬ ಸದಸ್ಯರ ಮರಣ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ.<br><br>ವಂಶವೃಕ್ಷ ದೃಢೀಕರಣ ಪತ್ರವನ್ನು ಪಡೆಯಲು ಸಕಾಲ ಕಾಯ್ದೆಯಡಿ 14 ದಿನಗಳ ಕಾಲಮಿತಿಯನ್ನು ನಿಗದಿಪಡಿಸಲಾಗಿದೆ ಹಾಗೂ ವಂಶವೃಕ್ಷ ದೃಢೀಕರಣ ಪತ್ರ ಕೋರಿ ಸಲ್ಲಿಕೆಯಾಗಿರುವ ಅರ್ಜಿಯನ್ನು ಪೂರಕ ದಾಖಲೆಗಳನ್ನು ಒದಗಿಸಿರುವುದಿಲ್ಲವಾದ್ದರಿಂದ ತಿರಸ್ಕರಿಸಲು ಗರಿಷ್ಟ ಮಿತಿ ಇರುವುದಿಲ್ಲ. |
| (ಉ) | ಬೆಂಗಳೂರು ಉತ್ತರ ತಾಲೂಕು ಮತ್ತು ದಕ್ಷಿಣ ತಾಲ್ಲೂಕಿನಲ್ಲಿರುವ ನಾಡ ಕಛೇರಿಯ ಕೆಲವು . ತಹಶೀಲ್ದಾರರು ಲಂಚಕ್ಕಾಗಿ ಹಲವಾರು ಕಾರಣಗಳನ್ನು ನೀಡಿ ಅರ್ಜಿಗಳನ್ನು ತಿರಸ್ಕಾರ ಮಾಡುತ್ತಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಎಷ್ಟು ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ? | ಬಂದಿರುವುದಿಲ್ಲ. |

ಸಂಖ್ಯೆ: ಕಂಇ 66 ಎಜೆಎಸ್ 2025

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

# ಅನುಬಂಧ-1

| Sl No | Service_Eng_Name | Service_Kan_Name | Is Sakala Enabled | Sakala No.Of Days | Service Fees in Rupees | Designated Officer |
|---|---|---|---|---|---|---|
| 1 | Population Certificate | ಜನಸಂಖ್ಯಾ ಪ್ರಮಾಣ ಪತ್ರ | Y | 7 | 40 | Tahsildar |
| 2 | Caste and Income Certficate | ಜಾತಿ ಮತ್ತು ಆದಾಯ ಪ್ರಮಾಣ ಪತ್ರ | Y | 21 | 40 | Tahsildar |
| 3 | Caste Certificate (Cat-A) | ಜಾತಿ ಪ್ರಮಾಣ ಪತ್ರ (ಪ್ರವರ್ಗ-ಎ) | Y | 21 | 40 | Tahsildar |
| 4 | Caste Certificate (SC/ST) | ಜಾತಿ ಪ್ರಮಾಣ ಪತ್ರ (ಅ.ಜಾ/ಅ.ಪಂ) | Y | 21 | 40 | Tahsildar |
| 5 | OBC Certificate (Central) | ಹಿಂದುಳಿದ ವರ್ಗ ಪ್ರ.ಪತ್ರ (ಕೇ.ಸ) | Y | 21 | 40 | Tahsildar |
| 6 | Residence Certificate | ವಾಸ ಸ್ಥಳ ಪ್ರಮಾಣ ಪತ್ರ | Y | 14 | 40 | Deputy Tahsildar |
| 7 | Income Certificate | ಆದಾಯ ಪ್ರಮಾಣ ಪತ್ರ | Y | 21 | 40 | Deputy Tahsildar |
| 8 | Non Tenancy Certificate | ಗೇಣಿರಹಿತ ದೃಢೀಕರಣ ಪತ್ರ | Y | 7 | 40 | Tahsildar |
| 9 | Widow Certificate | ವಿಧವೆ ದೃಢೀಕರಣ ಪತ್ರ | Y | 14 | 40 | Deputy Tahsildar |
| 10 | Living Certificate | ಜೀವಂತ ದೃಡೀಕರಣ ಪತ್ರ | Y | 7 | 40 | Deputy Tahsildar |
| 11 | Agricultural Family member cer | ವ್ಯವಸಾಯಗಾರರ ಕುಟುಂಬದ ದೃಡೀಕರಣ ಪತ್ರ | Y | 14 | 40 | Deputy Tahsildar |
| 12 | No Re-Marriage Certificate | ಮರುವಿವಾಹವಾಗದಿರುವ ಬಗ್ಗೆ ದೃಡೀಕರಣ ಪತ್ರ | Y | 7 | 40 | Deputy Tahsildar |
| 13 | Land less Certificate | ಜಮೀನು ಇಲ್ಲದಿರುವ ಬಗ್ಗೆ ದೃಡೀಕರಣ ಪತ್ರ | Y | 7 | 40 | Tahsildar |
| 14 | Surviving Family Members Certificate | ಮೃತರ ಕುಟುಂಬ ಸದಸ್ಯರ ದೃಡೀಕರಣ ಪತ್ರ | Y | 14 | 40 | Deputy Tahsildar |
| 15 | Unemployment Certificate | ನಿರುದ್ಯೋಗಿ ದೃಢಿಕರಣ ಪತ್ರ | Y | 7 | 40 | Deputy Tahsildar |
| 16 | No Govt. Job Certificate | ಸರ್ಕಾರಿ ನೌಕರಿ ಇಲ್ಲದಿರುವ ಬಗ್ಗೆ ಪ್ರಮಾಣ ಪತ್ರ | Y | 7 | 40 | Deputy Tahsildar |
| 17 | Agriculturist Certificate | ವ್ಯವಸಾಯಗಾರ ದೃಡಿಕರಣ ಪತ್ರ | Y | 14 | 40 | Deputy Tahsildar |
| 18 | Small / Marginal farmer Certificate | ಸಣ್ಣ /ಅತಿ ಸಣ್ಣ ಹಿಡುವಳಿದಾರ ಪ್ರಮಾಣ ಪತ್ರ | Y | 14 | 40 | Tahsildar |
| 19 | Agricultural Labour Certficate | ಕೃಷಿ ಕಾರ್ಮಿಕ ಪ್ರಮಾಣ ಪತ್ರ | Y | 14 | 40 | Tahsildar |
| 20 | Non creamy layer Certificate | ಮೇಲುಸ್ತರಕ್ಕೆ ಸೇರಿಲ್ಲವೆಂದು ದೃಢಿಕರಣ ಪತ್ರ | Y | 7 | 40 | Deputy Tahsildar |
| 21 | Land holding Certificate | ಭೂ ಹಿಡುವಳಿ ಪ್ರಮಾಣ ಪತ್ರ | Y | 7 | 40 | Tahsildar |
| 22 | Bonafide Certificate | ಬೋನಫೈಡ್ ದೃಡಿಕರಣ ಪತ್ರ | Y | 7 | 40 | Deputy Tahsildar |

| Sl No | Service_Eng_Name | Service_Kan_Name | Is Sakala Enabled | Sakala No.Of Days | Service Fees in Rupees | Designated Officer |
|---|---|---|---|---|---|---|
| 23 | Solvency Certificate | ಸಾಲ ತೀರಿಸುವ ಶಕ್ತಿ ಪ್ರಮಾಣ ಪತ್ರ | Y | 21 | 40 | Tahsildar |
| 24 | Domicile Certificate | ನಿವಾಸಿ ಪ್ರಮಾಣ ಪತ್ರ | Y | 14 | 40 | Deputy Tahsildar |
| 25 | Income Certificate for compass for Employment | ಆದಾಯ ದೃಢಿಕರಣ ಪತ್ರ (ಅನುಕಂಪದ ಆದಾರದ ನೇಮಕಾತಿಗೆ) | Y | 21 | 40 | Tahsildar |
| 26 | Attestation of Family Tree | ಕುಟುಂಬ ವಂಶವೃಕ್ಷ ದೃಢಿಕರಣ ಪತ್ರ | Y | 14 | 40 | Deputy Tahsildar |
| 27 | HK Region Residence and Eligibility | ಹೈದ್ರಾಬಾದ್-ಕರ್ನಾಟಕ ವಿಭಾಗ/ವಲಯದ ವಾಸಸ್ಥಳ ದೃಢೀಕರಣ ಪತ್ರ | Y | 30 | 40 | Tahsildar/AC |
| 28 | Crop Certificate | ಬೆಳೆ ದೃಡೀಕರಣ ಪತ್ರ | Y | 12 | 40 | Deputy Tahsildar |
| 29 | Minority Certificate | ಅಲ್ಪಸಂಖ್ಯಾತ ಪ್ರಮಾಣ ಪತ್ರ | Y | 7 | 40 | Tahsildar |
| 30 | General Certificate (Arya Vysya) | ಜಾತಿ ಪ್ರಮಾಣ ಪತ್ರ (ಆರ್ಯ ವೈಶ್ಯ) | Y | 21 | 40 | Tahsildar |
| 31 | Income and Asset Certificate(EWS) | ಆದಾಯ ಮತ್ತು ಸ್ವತ್ತು (EWS) ಪ್ರಮಾಣ ಪತ್ರ | Y | 21 | 40 | Tahsildar |
| 32 | Caste Certificate (SC/ST-Migrant) | ಜಾತಿ ಪ್ರಮಾಣ ಪತ್ರ (ಅ.ಜಾ/ಅ.ಪಂ - ವಲಸಿಗರು) | N | | 40 | Tahsildar |
| 33 | Physically Handicapped Pension | ಅಂಗವಿಕಲ ಪೋಷಣಾ ವೇತನ | Y | 21 | 0 | Deputy Tahsildar |
| 34 | Widow Pension | ನಿರ್ಗತಿಕ ವಿಧವಾ ವೇತನ | Y | 21 | 0 | Deputy Tahsildar |
| 35 | Sandhya Suraksha Yojane | ಸಂಧ್ಯಾ ಸುರಕ್ಷಾ ಯೋಜನೆ | Y | 21 | 0 | Deputy Tahsildar |
| 36 | National Family Benefit Scheme | ರಾಷ್ಟ್ರೀಯ ಕುಟುಂಬ ಕ್ಷೇಮ ಯೋಜನೆ | N | | 0 | Tahsildar |
| 37 | Indira Gandhi National Old Age Pension | ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ | Y | 21 | 0 | Deputy Tahsildar |
| 38 | Mythiri | ಮೈತ್ರಿ | Y | 21 | 0 | Deputy Tahsildar |
| 39 | Manaswini | ಮನಸ್ವಿನಿ | Y | 21 | 0 | Deputy Tahsildar |
| 40 | Acid Victim Pension | ಆಸಿಡ್ ದಾಳಿಗೊಳಗಾದ ಮಹಿಳೆಯ ವೇತನ | Y | 21 | 0 | Deputy Tahsildar |
| 41 | Farmer Widow Pension | ರೈತರ ವಿಧವಾ ವೇತನ | Y | 21 | 0 | Deputy Tahsildar |
| 42 | Endosalphan Victim Pension | ಎಂಡೋಸಲ್ಫಾನ್ ವಿಕ್ಟಿಮ್ ಪೆನ್ಷನ್ | Y | 21 | 0 | Deputy Tahsildar |

ಅನುಬಂಧ-2

**ಕರ್ನಾಟಕ ಸರ್ಕಾರ**

ಸಂಖ್ಯೆ:ಕಂಇ 44 ಎಜೆಎಸ್ 2018.

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:10.09.2018

**ಸುತ್ತೋಲೆ**

ಸಕಾಲ ಸೇವೆಗಳನ್ನು ಗಣಕೀಕೃತಗೊಳಿಸಲು ಮತ್ತು ಸಕಾಲ ಸೇವೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 28.12.2017 ರಂದು ನಡೆದ ಸಭೆಯಲ್ಲಿ ಅಟಲ್‌ಜೀ ಜನಸ್ನೇಹಿ ಕೇಂದ್ರ ಯೋಜನೆಯಡಿಯಲ್ಲಿ ನೀಡುತ್ತಿರುವ ಕಂದಾಯ ಇಲಾಖೆಯ ವಿವಿಧ ಸೇವೆಗಳ ಸೇವಾ ವಿಲೇವಾರಿಗಾಗಿ ಅಗತ್ಯವಾದ ಎಲ್ಲಾ ದಾಖಲೆಗಳನ್ನು ಸ್ಪಷ್ಟವಾಗಿ ಪಟ್ಟಿ ಮಾಡಿ, ವ್ಯಾಖ್ಯಾನಿಸಿ ಅರ್ಜಿದಾರರ ಅರ್ಜಿ ಸಲ್ಲಿಸುವ ಪ್ರಕ್ರಿಯೆಯ ಹಂತದಲ್ಲಿಯೇ ದಾಖಲೆಗಳನ್ನು ಕಡ್ಡಾಯವಾಗಿ ನಮೂದು ಮಾಡಲು ಹಾಗೂ ನಂತರದ ಹಂತದಲ್ಲಿ ನಾಗರಿಕರಿಗೆ ಯಾವುದೇ ಸಮಸ್ಯೆಗಳು ಬರದಂತೆ ಮಾಡಲು, ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ನೀಡುತ್ತಿರುವ ವಿವಿಧ ಸೇವೆಗಳ ಪೈಕಿ, ಆದಾಯ ಪ್ರಮಾಣ ಪತ್ರ ಮತ್ತು ನಿವಾಸಿ ಪ್ರಮಾಣ ಪತ್ರಗಳಿಗಾಗಿ ತೆಗೆದುಕೊಳ್ಳಬೇಕಾದ ದಾಖಲೆಗಳ ಪಟ್ಟಿಯನ್ನು ಪಟ್ಟಿ ಮಾಡಿ, ನಡವಳಿಯನ್ನು ಹೊರಡಿಸಲಾಗಿರುತ್ತದೆ.

ಕಂದಾಯ ಇಲಾಖೆಯ ವಿವಿಧ ಪ್ರಮಾಣ ಪತ್ರಗಳಿಗಾಗಿ, ನಾಗರಿಕರಿಂದ ಅರ್ಜಿ ಸಲ್ಲಿಸುವ ಪ್ರಕ್ರಿಯೆಯ ಹಂತದಲ್ಲಿಯೇ ಕಡ್ಡಾಯವಾಗಿ Standardise ಮಾಡಿರುವಂತಹ ದಾಖಲೆಗಳನ್ನು ಪಡೆದುಕೊಂಡಲ್ಲಿ, ನಾಗರಿಕರು ಸಕಾಲ ಸೇವೆಯಡಿ ಸಲ್ಲಿಸುವ ಅರ್ಜಿಗಳು ತಿರಸ್ಕೃತವಾಗದೇ ಇರುವುದು ಕಡಿಮೆಯಾಗುವ ಸಾಧ್ಯತೆ ಇರುತ್ತದೆ.

ಅರ್ಜಿದಾರರಿಂದ ವಿವಿಧ ಪ್ರಮಾಣ ಪತ್ರಗಳಿಗಾಗಿ ಪಡೆಯಬೇಕಾಗಿರುವ ದಾಖಲೆಗಳನ್ನು Standerdise ಮಾಡಲು, ಕಂದಾಯ ಇಲಾಖೆಯ ವಿವಿಧ 27 ಪ್ರಮಾಣ ಪತ್ರಗಳ ಸೇವೆಗಾಗಿ ಸಾರ್ವಜನಿಕರು ಅರ್ಜಿಯೊಂದಿಗೆ ಸಲ್ಲಿಸಬೇಕಾಗಿರುವ ದಾಖಲೆಗಳ ಪಟ್ಟಿಯನ್ನು ಸಿದ್ಧಪಡಿಸಿ ಇದರೊಂದಿಗೆ ಅನುಬಂಧದಲ್ಲಿ ಲಗತ್ತಿಸಿದೆ.

ಅದರಂತೆ ಸದರಿ Standerdise ಮಾಡಿರುವಂತಹ ದಾಖಲೆಗಳನ್ನು ಕಡ್ಡಾಯವಾಗಿ ಅರ್ಜಿದಾರರಿಂದ ವಿವಿಧ ಪ್ರಮಾಣ ಪತ್ರಗಳ ಸೇವೆಗಳಿಗಾಗಿ ರಾಜ್ಯದ ಎಲ್ಲಾ ನಾಡಕಛೇರಿಗಳಲ್ಲಿ ಅರ್ಜಿಯೊಂದಿಗೆ ಪಡೆದುಕೊಂಡು, ಸಕಾಲ ಸೇವೆಯಡಿ ಸಲ್ಲಿಸುವ ಅರ್ಜಿಗಳನ್ನು ನಿಗದಿತ ಅವಧಿಯೊಳಗೆ ವಿಲೇವಾರಿ ಮಾಡಲು ಸೂಚಿಸಿದೆ.

GL: 894
Dt: 5/10/18

4/10/18

(ಸಿ.ಪುಟ್ಟನಂಜಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂಮಾಪನ)

ಗೆ:

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು/ಇಲಾಖಾ ಮುಖ್ಯಸ್ಥರುಗಳು
2) ಎಲ್ಲಾ ಪ್ರಾದೇಶಿಕ ಆಯುಕ್ತರು
3) ನಿರ್ದೇಶಕರು, ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯ, ಬೆಂಗಳೂರು

SO

4) ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು
5) ಎಲ್ಲಾ ಉಪವಿಭಾಗಾಧಿಕಾರಿಗಳು/ತಹಶೀಲ್ದಾರ್‌ಗಳು ಜಿಲ್ಲಾಧಿಕಾರಿಗಳ ಮುಖಾಂತರ
6) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಕಂದಾಯ ಇಲಾಖೆ
7) ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ(ಭೂಮಾಪನ ಮತ್ತು ಸೇವೆಗಳು-1&3)
8) ಶಾಖಾ ರಕ್ಷಾ ಕಡತ/ಹೆಚ್ಚುವರಿ ಕಡತ

SO

ಸುತ್ತೋಲೆ ಸಂಖ್ಯೆ: ಕಂಇ 44 ಎಜೆಎಸ್ 2018 ದಿನಾಂಕ: 10.09.2018ರ ಅನುಬಂಧ

| ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ನಾಗರೀಕರಿಗೆ ವಿವಿಧ ಪ್ರಮಾಣ ಪತ್ರಗಳ ಸೇವೆಗಾಗಿ ಅಗತ್ಯವಿರುವ ದಾಖಲೆಗಳು | | |
|---|---|---|
| ಕ್ರ.ಸಂ. | ಸೇವೆಗಳು | ಪ್ರಮಾಣೀಕೃತ ದಾಖಲೆಗಳು |
| 1 | ಜನಸಂಖ್ಯೆ ದೃಢೀಕರಣ ಪತ್ರ | ಇತ್ತೀಚಿನ ದಾಖಲೆಗಳ ಆಧಾರವಾದ,<br>ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>ಕಾರ್ಯ ವಿಧಾನ:<br>ಈ ಮೇಲಿನ ದಾಖಲೆಗಳಲ್ಲಿರುವ ಮಾಹಿತಿಗಳಲ್ಲದೇ ಅರ್ಜಿದಾರರು ಬೇರೆ ಮಾಹಿತಿ ಇರುವ ಪ್ರಮಾಣ ಪತ್ರವನ್ನು ಬಯಸಿದಲ್ಲಿ ಕ್ಷೇತ್ರ ಪರಿಶೀಲನೆ ಮಾಡಿ ಪ್ರಮಾಣ ಪತ್ರ ವಿತರಿಸುವುದು. |
| 2 | ಜಾತಿ ಮತ್ತು ಆದಾಯ ದೃಢೀಕರಣ ಪತ್ರ. | ದಾಖಲೆಗಳು:<br>(1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>(2) ಶಾಲಾ ವರ್ಗಾವಣೆ ಪ್ರಮಾಣ ಪತ್ರ<br>ಐಚ್ಛಿಕ:<br>ಕುಟುಂಬದ ಇತರೆ ಸದಸ್ಯರು ಎಂದು ಗುರುತಿಸುವ ಇತ್ತೀಚಿನ,<br>(1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಗ್ರಾಮ ಲೆಕ್ಕಿಗರಿಂದ ಪಡೆದ ವಂಶವೃಕ್ಷ<br>(2) ವೇತನ ಸ್ಲಿಪ್ ಅಥವಾ ಆದಾಯ ತೆರಿಗೆ ಪಾವತಿ (ಆದಾಯ ದೃಢೀಕರಣ ಪತ್ರಕ್ಕಾಗಿ)<br>ಕಾರ್ಯ ವಿಧಾನ:<br>ಮೇಲ್ಕಂಡ ಎಲ್ಲಾ ದಾಖಲೆಗಳೊಂದಿಗೆ ಅರ್ಜಿಗಳನ್ನು ಪಡೆದು ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡಿದ ವರದಿಯನ್ನು ಕಂದಾಯ ನಿರೀಕ್ಷಕರಿಂದ ಅನುಮೋದನೆಯಾದ ನಂತರ ಪ್ರಮಾಣ ಪತ್ರಗಳ ವಿತರಣೆ. |
| 3 | ಜಾತಿ ಪ್ರಮಾಣ ಪತ್ರ (ಪ್ರವರ್ಗ-೧) | ದಾಖಲೆಗಳು:<br>(1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>(2) ಶಾಲಾ ವರ್ಗಾವಣೆ ಪ್ರಮಾಣ ಪತ್ರ<br>ಐಚ್ಛಿಕ:<br>ಕುಟುಂಬದ ಇತರೆ ಸದಸ್ಯರು ಎಂದು ಗುರುತಿಸುವ ಇತ್ತೀಚಿನ,<br>(1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಗ್ರಾಮ ಲೆಕ್ಕಿಗರಿಂದ ಪಡೆದ ವಂಶವೃಕ್ಷ<br>(2) ವೇತನ ಸ್ಲಿಪ್ ಅಥವಾ ಆದಾಯ ತೆರಿಗೆ ಪಾವತಿ (ಆದಾಯ ದೃಢೀಕರಣ ಪತ್ರಕ್ಕಾಗಿ)<br>ಕಾರ್ಯ ವಿಧಾನ:<br>ಮೇಲ್ಕಂಡ ಎಲ್ಲಾ ದಾಖಲೆಗಳೊಂದಿಗೆ ಅರ್ಜಿಗಳನ್ನು ಪಡೆದು ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡಿದ ವರದಿಯನ್ನು ಕಂದಾಯ ನಿರೀಕ್ಷಕರಿಂದ ಅನುಮೋದನೆಯಾದ ನಂತರ ಪ್ರಮಾಣ ಪತ್ರಗಳ ವಿತರಣೆ. |

| ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ನಾಗರೀಕರಿಗೆ ವಿವಿಧ ಪ್ರಮಾಣ ಪತ್ರಗಳ ಸೇವೆಗಾಗಿ ಅಗತ್ಯವಿರುವ ದಾಖಲೆಗಳು | | |
|---|---|---|
| ಕ್ರ.ಸಂ. | ಸೇವೆಗಳು | ಪ್ರಮಾಣೀಕೃತ ದಾಖಲೆಗಳು |
| 4 | ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಪ್ರಮಾಣ ಪತ್ರ (ಪರಿಶಿಷ್ಟ ಜಾತಿ/ಪಂಗಡ) | ದಾಖಲೆಗಳು:<br>(1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>(2) ಶಾಲಾ ವರ್ಗಾವಣೆ ಪ್ರಮಾಣ ಪತ್ರ<br>ಐಚ್ಛಿಕ:<br>ಕುಟುಂಬದ ಇತರೆ ಸದಸ್ಯರು ಎಂದು ಗುರುತಿಸುವ ಇತ್ತೀಚಿನ,<br>(1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಗ್ರಾಮ ಲೆಕ್ಕಿಗರಿಂದ ಪಡೆದ ವಂಶವೃಕ್ಷ<br>(2) ವೇತನ ಸ್ಲಿಪ್ ಅಥವಾ ಆದಾಯ ತೆರಿಗೆ ಪಾವತಿ (ಆದಾಯ ದೃಢೀಕರಣ ಪತ್ರಕ್ಕಾಗಿ)<br>ಕಾರ್ಯ ವಿಧಾನ:<br>ಮೇಲ್ಕಂಡ ಎಲ್ಲಾ ದಾಖಲೆಗಳೊಂದಿಗೆ ಅರ್ಜಿಗಳನ್ನು ಪಡೆದು ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡಿದ ವರದಿಯನ್ನು ಕಂದಾಯ ನಿರೀಕ್ಷಕರಿಂದ ಅನುಮೋದನೆಯಾದ ನಂತರ ಪ್ರಮಾಣ ಪತ್ರಗಳ ವಿತರಣೆ. |
| 5 | ಇತರೆ ಹಿಂದುಳಿದ ವರ್ಗಗಳ ದೃಢೀಕರಣ ಪತ್ರ (ಕೇಂದ್ರ) | ದಾಖಲೆಗಳು:<br>(1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>(2) ಶಾಲಾ ವರ್ಗಾವಣೆ ಪ್ರಮಾಣ ಪತ್ರ<br>ಐಚ್ಛಿಕ:<br>ಕುಟುಂಬದ ಇತರೆ ಸದಸ್ಯರು ಎಂದು ಗುರುತಿಸುವ ಇತ್ತೀಚಿನ,<br>(1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಗ್ರಾಮ ಲೆಕ್ಕಿಗರಿಂದ ಪಡೆದ ವಂಶವೃಕ್ಷ<br>(2) ವೇತನ ಸ್ಲಿಪ್ ಅಥವಾ ಆದಾಯ ತೆರಿಗೆ ಪಾವತಿ (ಆದಾಯ ದೃಢೀಕರಣ ಪತ್ರಕ್ಕಾಗಿ)<br>ಕಾರ್ಯ ವಿಧಾನ:<br>ಮೇಲ್ಕಂಡ ಎಲ್ಲಾ ದಾಖಲೆಗಳೊಂದಿಗೆ ಅರ್ಜಿಗಳನ್ನು ಪಡೆದು ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡಿದ ವರದಿಯನ್ನು ಕಂದಾಯ ನಿರೀಕ್ಷಕರಿಂದ ಅನುಮೋದನೆಯಾದ ನಂತರ ಪ್ರಮಾಣ ಪತ್ರಗಳ ವಿತರಣೆ. |
| 6 | ವಾಸಸ್ಥಳ ದೃಢೀಕರಣ ಪತ್ರ | ಇತ್ತೀಚಿನ ದಾಖಲೆಗಳ ಆಧಾರವಾದ,<br>ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>ಕಾರ್ಯವಿಧಾನ:<br>ಈ ಮೇಲಿನ ದಾಖಲೆಗಳಲ್ಲಿರುವ ಮಾಹಿತಿಗಳಲ್ಲದೇ ಅರ್ಜಿದಾರರು ಬೇರೆ ಮಾಹಿತಿ ಇರುವ ಪ್ರಮಾಣ ಪತ್ರವನ್ನು ಬಯಸಿದಲ್ಲಿ ಕ್ಷೇತ್ರ ಪರಿಶೀಲನೆ ಮಾಡಿ ಪ್ರಮಾಣ ಪತ್ರ ವಿತರಿಸುವುದು. |

| ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ನಾಗರೀಕರಿಗೆ ವಿವಿಧ ಪ್ರಮಾಣ ಪತ್ರಗಳ ಸೇವೆಗಾಗಿ ಅಗತ್ಯವಿರುವ ದಾಖಲೆಗಳು | | |
|---|---|---|
| ಕ್ರ.ಸಂ. | ಸೇವೆಗಳು | ಪ್ರಮಾಣೀಕೃತ ದಾಖಲೆಗಳು |
| 7 | ಆದಾಯ ದೃಢೀಕರಣ ಪತ್ರ | **ಕಡ್ಡಾಯ ದಾಖಲೆಗಳು:**<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಅರ್ಜಿ ನಮೂನೆಯಲ್ಲಿ ಆದಾಯದ ಬಗ್ಗೆ ಸ್ವಯಂ ಘೋಷಿತ ಪತ್ರ<br>**ಐಚ್ಛಿಕ:**<br>1) ವೇತನ ಸ್ಲಿಪ್<br>2) ಆದಾಯ ತೆರಿಗೆ ಪಾವತಿ<br>**ಕಾರ್ಯ ವಿಧಾನ:**<br>ಮೇಲ್ಕಂಡ ದಾಖಲೆಗಳೊಂದಿಗೆ ಗ್ರಾಮಲೆಕ್ಕಿಗರಿಂದ ಕ್ಷೇತ್ರ ಪರಿಶೀಲನೆ ಮಾಡಿ ಪ್ರಮಾಣ ಪತ್ರ ವಿತರಣೆ. |
| 8 | ಗೇಣಿ ರಹಿತ ದೃಢೀಕರಣ ಪತ್ರ | 1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಪಹಣಿ<br>3) ಆಕ್ಷೇಪಣೆ ಇಲ್ಲದಿರುವ ಪ್ರಮಾಣ ಪತ್ರ, ತೆರಿಗೆ ಪಾವತಿ ರಶೀದಿ |
| 9 | ವಿಧವಾ ಪ್ರಮಾಣ ಪತ್ರ | **ಕಡ್ಡಾಯ ದಾಖಲೆಗಳು:**<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಅರ್ಜಿ ನಮೂನೆಯಲ್ಲಿ ಸ್ವಯಂ ಘೋಷಿತ ಪತ್ರ<br>**ಕಾರ್ಯ ವಿಧಾನ:**<br>ಮೇಲ್ಕಂಡ ದಾಖಲೆಗಳೊಂದಿಗೆ ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡಿದ ವರದಿಯ ಆಧಾರದ ಮೇಲೆ ಪ್ರಮಾಣ ಪತ್ರ ವಿತರಿಸುವುದು. |
| 10 | ಜೀವಂತ ದೃಢೀಕರಣ ಪತ್ರ | **ಕಡ್ಡಾಯ ದಾಖಲೆಗಳು:**<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಅರ್ಜಿ ನಮೂನೆಯಲ್ಲಿ ಸ್ವಯಂ ಘೋಷಿತ ಪತ್ರ. |

| ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ನಾಗರೀಕರಿಗೆ ವಿವಿಧ ಪ್ರಮಾಣ ಪತ್ರಗಳ ಸೇವೆಗಾಗಿ ಅಗತ್ಯವಿರುವ ದಾಖಲೆಗಳು | | |
|---|---|---|
| ಕ್ರ.ಸಂ. | ಸೇವೆಗಳು | ಪ್ರಮಾಣೀಕೃತ ದಾಖಲೆಗಳು |
| 11 | ವ್ಯವಸಾಯಗಾರರ ಕುಟುಂಬದ ಸದಸ್ಯ ದೃಢೀಕರಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಪಹಣಿ ಪತ್ರ<br>ಕಾರ್ಯ ವಿಧಾನ:<br>ಭೂಮಿ ಆನ್‌ಲೈನ್‌ನಲ್ಲಿ ಪಹಣಿಯನ್ನು ಆಪರೇಟರ್ ವೀಕ್ಷಿಸುವುದು. ಪಹಣಿಯಲ್ಲಿ ಅರ್ಜಿದಾರರ ಹೆಸರು ಇದ್ದಲ್ಲಿ, ಪಹಣಿಯ ಆಧಾರದ ಮೇಲೆ ಒಂದು ದಿನದ ಸೇವೆಯಾಗಿ (ONE DAY SERVICE) ಪ್ರಮಾಣ ಪತ್ರ ವಿತರಿಸುವುದು. ಪಹಣಿಯಲ್ಲಿ ಅರ್ಜಿದಾರರ ಹೆಸರು ಇಲ್ಲದಿದ್ದಲ್ಲಿ, ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡುವುದು ಅಥವಾ ಗ್ರಾಮಲೆಕ್ಕಿಗರಿಂದ ವಂಶವೃಕ್ಷವನ್ನು ಪಡೆಯುವುದು. (ಅರ್ಜಿದಾರರಿಂದ ಅಥವಾ ಇಲಾಖೆ ವತಿಯಿಂದ) ಮತ್ತು ಪ್ರಮಾಣ ಪತ್ರ ವಿತರಿಸುವುದು. |
| 12 | ಮರು ವಿವಾಹವಾಗದಿರುವ ದೃಢೀಕರಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಅರ್ಜಿ ನಮೂನೆಯಲ್ಲಿ ಆದಾಯದ ಬಗ್ಗೆ ಸ್ವಯಂ ಘೋಷಿತ ಪತ್ರ<br>ಕಾರ್ಯ ವಿಧಾನ:<br>ಮೇಲ್ಕಂಡ ದಾಖಲೆಗಳೊಂದಿಗೆ ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡಿದ ವರದಿಯ ಆಧಾರದ ಮೇಲೆ ಪ್ರಮಾಣ ಪತ್ರ ವಿತರಿಸುವುದು. |
| 13 | ಜಮೀನು ಇಲ್ಲದಿರುವ ದೃಢೀಕರಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಅರ್ಜಿ ನಮೂನೆಯಲ್ಲಿ ಸ್ವಯಂ ಘೋಷಿತ ಪತ್ರ<br>ಕಾರ್ಯ ವಿಧಾನ:<br>ಮೇಲ್ಕಂಡ ದಾಖಲೆಗಳೊಂದಿಗೆ ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡಿದ ವರದಿಯ ಆಧಾರದ ಮೇಲೆ ಪ್ರಮಾಣ ಪತ್ರ ವಿತರಿಸುವುದು. |

| ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ನಾಗರೀಕರಿಗೆ ವಿವಿಧ ಪ್ರಮಾಣ ಪತ್ರಗಳ ಸೇವೆಗಾಗಿ ಅಗತ್ಯವಿರುವ ದಾಖಲೆಗಳು | | |
|---|---|---|
| ಕ್ರ.ಸಂ. | ಸೇವೆಗಳು | ಪ್ರಮಾಣೀಕೃತ ದಾಖಲೆಗಳು |
| 14 | ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರ | **ಕಡ್ಡಾಯ ದಾಖಲೆಗಳು:**<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಅರ್ಜಿ ನಮೂನೆಯಲ್ಲಿ ಸ್ವಯಂ ಘೋಷಿತ ಪತ್ರ<br>3) ಗ್ರಾಮಲೆಕ್ಕಿಗರಿಂದ ವಿತರಿಸಿದ ವಂಶವೃಕ್ಷ (ಅರ್ಜಿದಾರರು ಸಲ್ಲಿಸಬಹುದು ಅಥವಾ ಗ್ರಾಮಲೆಕ್ಕಿಗರಿಂದ ಇಲಾಖೆ ಪತಿಯಿಂದ ಪಡೆಯಬಹುದು).<br>4) ಮರಣ ಪ್ರಮಾಣ ಪತ್ರ<br>**ಕಾರ್ಯ ವಿಧಾನ:**<br>ಮೇಲ್ಕಂಡ ದಾಖಲೆಗಳೊಂದಿಗೆ ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡಿದ ವರದಿಯ ಆಧಾರದ ಮೇಲೆ ಪ್ರಮಾಣ ಪತ್ರ ವಿತರಿಸುವುದು. |
| 15 | ನಿರುದ್ಯೋಗಿ ದೃಢೀಕರಣ ಪತ್ರ | **ಕಡ್ಡಾಯ ದಾಖಲೆಗಳು:**<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಅರ್ಜಿ ನಮೂನೆಯಲ್ಲಿ ಸ್ವಯಂ ಘೋಷಿತ ಪತ್ರ<br>3) ಉದ್ಯೋಗ ವಿನಿಮಯ ಕಛೇರಿಯಿಂದ ಪಡೆದ ಪ್ರಮಾಣ ಪತ್ರ<br>4) ಶಾಲಾ ವರ್ಗಾವಣೆ ಪ್ರಮಾಣ ಪತ್ರ<br>**ಕಾರ್ಯವಿಧಾನ:**<br>ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡಿ ನೀಡಿದ ವರದಿಯ ಮೇಲೆ ಪ್ರಮಾಣ ಪತ್ರ ವಿತರಿಸುವುದು. |
| 16 | ಸರ್ಕಾರಿ ನೌಕರಿಯಲ್ಲಿ ಇಲ್ಲದಿರುವ ದೃಢೀಕರಣ ಪತ್ರ | **ಕಡ್ಡಾಯ ದಾಖಲೆಗಳು:**<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಅರ್ಜಿ ನಮೂನೆಯಲ್ಲಿ ಸ್ವಯಂ ಘೋಷಿತ ಪತ್ರ<br>3) ಉದ್ಯೋಗ ವಿನಿಮಯ ಕಛೇರಿಯಿಂದ ಪಡೆದ ಪ್ರಮಾಣ ಪತ್ರ<br>4) ಶಾಲಾ ವರ್ಗಾವಣೆ ಪ್ರಮಾಣ ಪತ್ರ<br>5) ಪೋಷಕರ ಮರಣ ದೃಢೀಕರಣ ಪತ್ರ<br>**ಕಾರ್ಯವಿಧಾನ:**<br>ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡಿ ನೀಡಿದ ವರದಿಯ ಮೇಲೆ ಪ್ರಮಾಣ ಪತ್ರ ವಿತರಿಸುವುದು. |

| ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ನಾಗರೀಕರಿಗೆ ವಿವಿಧ ಪ್ರಮಾಣ ಪತ್ರಗಳ ಸೇವೆಗಾಗಿ ಅಗತ್ಯವಿರುವ ದಾಖಲೆಗಳು | | |
|---|---|---|
| ಕ್ರ.ಸಂ. | ಸೇವೆಗಳು | ಪ್ರಮಾಣೀಕೃತ ದಾಖಲೆಗಳು |
| 17 | ವ್ಯವಸಾಯಗಾರರ ದೃಢೀಕರಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ, ಆಧಾರ್ ಕಾರ್ಡ್<br>2) ಪಹಣಿ ಪತ್ರ<br>ಕಾರ್ಯ ವಿಧಾನ:<br>ಭೂಮಿ ಆನ್‌ಲೈನ್‌ನಲ್ಲಿ ಪಹಣಿಯನ್ನು ಆಪರೇಟರ್ ವೀಕ್ಷಿಸುವುದು. ಪಹಣಿಯಲ್ಲಿ ಅರ್ಜಿದಾರರ ಹೆಸರು ಇದ್ದಲ್ಲಿ, ಪಹಣಿಯ ಆಧಾರದ ಮೇಲೆ ಒಂದು ದಿನದ ಸೇವೆಯಾಗಿ (ONE DAY SERVICE) ಪ್ರಮಾಣ ಪತ್ರ ವಿತರಿಸುವುದು. ಪಹಣಿಯಲ್ಲಿ ಅರ್ಜಿದಾರರ ಹೆಸರು ಇಲ್ಲದಿದ್ದಲ್ಲಿ, ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡುವುದು ಅಥವಾ ಗ್ರಾಮಲೆಕ್ಕಿಗರಿಂದ ವಂಶವೃಕ್ಷವನ್ನು ಪಡೆಯುವುದು. (ಅರ್ಜಿದಾರರಿಂದ ಅಥವಾ ಇಲಾಖೆ ವತಿಯಿಂದ) ಮತ್ತು ಪ್ರಮಾಣ ಪತ್ರ ವಿತರಿಸುವುದು. |
| 18 | ಸಣ್ಣ/ಅತಿ ಸಣ್ಣ ಹಿಡುವಳಿದಾರರ ದೃಢೀಕರಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಪಹಣಿ ಪತ್ರ<br>ಕಾರ್ಯ ವಿಧಾನ:<br>ಭೂಮಿ ಆನ್‌ಲೈನ್‌ನಲ್ಲಿ ಪಹಣಿಯನ್ನು ಆಪರೇಟರ್ ವೀಕ್ಷಿಸುವುದು. ಪಹಣಿಯಲ್ಲಿ ಅರ್ಜಿದಾರರ ಹೆಸರು ಇದ್ದಲ್ಲಿ, ಪಹಣಿಯ ಆಧಾರದ ಮೇಲೆ ಒಂದು ದಿನದ ಸೇವೆಯಾಗಿ (ONE DAY SERVICE) ಪ್ರಮಾಣ ಪತ್ರ ವಿತರಿಸುವುದು. ಪಹಣಿಯಲ್ಲಿ ಅರ್ಜಿದಾರರ ಹೆಸರು ಇಲ್ಲದಿದ್ದಲ್ಲಿ, ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡುವುದು ಅಥವಾ ಗ್ರಾಮಲೆಕ್ಕಿಗರಿಂದ ವಂಶವೃಕ್ಷವನ್ನು ಪಡೆಯುವುದು. (ಅರ್ಜಿದಾರರಿಂದ ಅಥವಾ ಇಲಾಖೆ ವತಿಯಿಂದ) ಮತ್ತು ಪ್ರಮಾಣ ಪತ್ರ ವಿತರಿಸುವುದು. |

| ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ನಾಗರೀಕರಿಗೆ ವಿವಿಧ ಪ್ರಮಾಣ ಪತ್ರಗಳ ಸೇವೆಗಾಗಿ ಅಗತ್ಯವಿರುವ ದಾಖಲೆಗಳು | | |
|---|---|---|
| ಕ್ರ.ಸಂ. | ಸೇವೆಗಳು | ಪ್ರಮಾಣೀಕೃತ ದಾಖಲೆಗಳು |
| 19 | ಕೃಷಿ ಕಾರ್ಮಿಕ ದೃಢೀಕರಣ ಪತ್ರ | **ಕಡ್ಡಾಯ ದಾಖಲೆಗಳು:**<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಪಹಣಿ ಪತ್ರ<br>**ಕಾರ್ಯ ವಿಧಾನ:**<br>ಭೂಮಿ ಆನ್‌ಲೈನ್‌ನಲ್ಲಿ ಪಹಣಿಯನ್ನು ಆಪರೇಟರ್ ವೀಕ್ಷಿಸುವುದು. ಪಹಣಿಯಲ್ಲಿ ಅರ್ಜಿದಾರರ ಹೆಸರು ಇದ್ದಲ್ಲಿ, ಪಹಣಿಯ ಆಧಾರದ ಮೇಲೆ ಒಂದು ದಿನದ ಸೇವೆಯಾಗಿ (ONE DAY SERVICE) ಪ್ರಮಾಣ ಪತ್ರ ವಿತರಿಸುವುದು. ಪಹಣಿಯಲ್ಲಿ ಅರ್ಜಿದಾರರ ಹೆಸರು ಇಲ್ಲದಿದ್ದಲ್ಲಿ, ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡುವುದು ಅಥವಾ ಗ್ರಾಮಲೆಕ್ಕಿಗರಿಂದ ವಂಶವೃಕ್ಷವನ್ನು ಪಡೆಯುವುದು. (ಅರ್ಜಿದಾರರಿಂದ ಅಥವಾ ಇಲಾಖೆ ವತಿಯಿಂದ) ಮತ್ತು ಪ್ರಮಾಣ ಪತ್ರ ವಿತರಿಸುವುದು. |
| 20 | ಮೇಲುಸ್ತರಕ್ಕೆ ಸೇರಿಲ್ಲವೆಂಬ ದೃಢೀಕರಣ ಪತ್ರ | **ಕಡ್ಡಾಯ ದಾಖಲೆಗಳು:**<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಅರ್ಜಿ ನಮೂನೆಯಲ್ಲಿ ಆದಾಯದ ಬಗ್ಗೆ ಸ್ವಯಂ ಘೋಷಿತ ಪತ್ರ<br>**ಐಚ್ಛಿಕ:**<br>1) ವೇತನ ಸ್ಲಿಪ್<br>2) ಆದಾಯ ತೆರಿಗೆ ಪಾವತಿ<br>**ಕಾರ್ಯ ವಿಧಾನ:**<br>ಮೇಲ್ಕಂಡ ದಾಖಲೆಗಳೊಂದಿಗೆ ಗ್ರಾಮಲೆಕ್ಕಿಗರಿಂದ ಕ್ಷೇತ್ರ ಪರಿಶೀಲನೆ ಮಾಡಿ ಪ್ರಮಾಣ ಪತ್ರ ವಿತರಣೆ. |
| 21 | ಭೂ ಹಿಡುವಳಿ ದೃಢೀಕರಣ ಪತ್ರ | **ಕಡ್ಡಾಯ ದಾಖಲೆಗಳು:**<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಪಹಣಿ ಪತ್ರ<br>**ಕಾರ್ಯ ವಿಧಾನ:**<br>ಭೂಮಿ ಆನ್‌ಲೈನ್‌ನಲ್ಲಿ ಪಹಣಿಯನ್ನು ಆಪರೇಟರ್ ವೀಕ್ಷಿಸುವುದು. ಪಹಣಿಯಲ್ಲಿ ಅರ್ಜಿದಾರರ ಹೆಸರು ಇದ್ದಲ್ಲಿ, ಪಹಣಿಯ ಆಧಾರದ ಮೇಲೆ ಒಂದು ದಿನದ ಸೇವೆಯಾಗಿ (ONE DAY SERVICE) ಪ್ರಮಾಣ ಪತ್ರ ವಿತರಿಸುವುದು. ಪಹಣಿಯಲ್ಲಿ ಅರ್ಜಿದಾರರ ಹೆಸರು ಇಲ್ಲದಿದ್ದಲ್ಲಿ, ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡುವುದು ಅಥವಾ ಗ್ರಾಮಲೆಕ್ಕಿಗರಿಂದ ವಂಶವೃಕ್ಷವನ್ನು ಪಡೆಯುವುದು. (ಅರ್ಜಿದಾರರಿಂದ ಅಥವಾ ಇಲಾಖೆ ವತಿಯಿಂದ) ಮತ್ತು ಪ್ರಮಾಣ ಪತ್ರ ವಿತರಿಸುವುದು. |

| ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ನಾಗರೀಕರಿಗೆ ವಿವಿಧ ಪ್ರಮಾಣ ಪತ್ರಗಳ ಸೇವೆಗಾಗಿ ಅಗತ್ಯವಿರುವ ದಾಖಲೆಗಳು | | |
|---|---|---|
| ಕ್ರ.ಸಂ. | ಸೇವೆಗಳು | ಪ್ರಮಾಣೀಕೃತ ದಾಖಲೆಗಳು |
| 22 | ಬೋನಫೈಡ್ ದೃಢೀಕರಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಶಾಲಾ ವರ್ಗಾವಣೆ ಪ್ರಮಾಣ ಪತ್ರ<br>3) ಅರ್ಜಿ ನಮೂನೆಯಲ್ಲಿ ಸ್ವಯಂ ಘೋಷಿತ ಪತ್ರ |
| 23 | ಸಾಲ ತೀರಿಸುವ ಶಕ್ತಿ ದೃಢೀಕರಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಭೂಮಾಲೀಕರ ಪಹಣಿ (ಆಪರೇಟರ್ ಆನ್‌ಲೈನ್‌ನಲ್ಲಿ ಕೂಡ ಮುದ್ರಿಸಬಹುದು) ಮತ್ತು ಜಮೀನಿಗೆ ಸಂಬಂಧಿಸಿದ ಇತರ ದಾಖಲೆಗಳು:<br>3) ಆಸ್ತಿಗೆ ಸಂಬಂಧಿಸಿದಂತೆ ಉಪ ನೋಂದಣಾಧಿಕಾರಿಗಳಿಂದ ಪಡೆದ ೧೨ ವರ್ಷಗಳ ಋಣಭಾರ ಪ್ರಮಾಣ ಪತ್ರ<br>4) ಆದಾಯ ತೆರಿಗೆ ಪಾವತಿ (if in income tax bracket) |
| 24 | ಉದ್ಯೋಗದ ಉದ್ದೇಶಕ್ಕೆ ಆದಾಯ ದೃಢೀಕರಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಅರ್ಜಿ ನಮೂನೆಯಲ್ಲಿ ಆದಾಯದ ಬಗ್ಗೆ ಸ್ವಯಂ ಘೋಷಿತ ಪತ್ರ<br>ಐಚ್ಛಿಕ:<br>1) ವೇತನ ಸ್ಲಿಪ್<br>2) ಆದಾಯ ತೆರಿಗೆ ಪಾವತಿ<br>ಕಾರ್ಯ ವಿಧಾನ:<br>ಮೇಲ್ಕಂಡ ದಾಖಲೆಗಳೊಂದಿಗೆ ಗ್ರಾಮಲೆಕ್ಕಿಗರಿಂದ ಕ್ಷೇತ್ರ ಪರಿಶೀಲನೆ ಮಾಡಿ ಪ್ರಮಾಣ ಪತ್ರ ವಿತರಣೆ. |
| 25 | ಅನುಕಂಪದ ಆಧಾರದ ನೇಮಕಾತಿಗೆ ಆದಾಯ ದೃಢೀಕರಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಮರಣ ಪ್ರಮಾಣ ಪತ್ರ<br>3) ಮರಣ ಹೊಂದಿದವರ ವೇತನ ಪ್ರಮಾಣ ಪತ್ರ ಹಾಗೂ ಪಿಂಚಣಿ ಪ್ರಮಾಣ ಪತ್ರ<br>4) ಅರ್ಜಿ ನಮೂನೆಯಲ್ಲಿ ಸ್ವಯಂ ಘೋಷಿತ ಪತ್ರ<br>ಕಾರ್ಯ ವಿಧಾನ:<br>ಗ್ರಾಮಲೆಕ್ಕಿಗರಿಂದ ಕ್ಷೇತ್ರ ಪರಿಶೀಲನೆ ಮಾಡಿದ ವರದಿಯ ಆಧಾರದ ಮೇಲೆ ಪ್ರಮಾಣ ಪತ್ರ ವಿತರಿಸುವುದು. |

| ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ನಾಗರೀಕರಿಗೆ ವಿವಿಧ ಪ್ರಮಾಣ ಪತ್ರಗಳ ಸೇವೆಗಾಗಿ ಅಗತ್ಯವಿರುವ ದಾಖಲೆಗಳು | | |
|---|---|---|
| ಕ್ರ.ಸಂ. | ಸೇವೆಗಳು | ಪ್ರಮಾಣೀಕೃತ ದಾಖಲೆಗಳು |
| 26 | ವಂಶವೃಕ್ಷ ದೃಢೀಕರಣ ಪತ್ರ | **ಕಡ್ಡಾಯ ದಾಖಲೆಗಳು:**<br>1) ಪಡಿತರ ಚೀಟಿ **ಅಥವಾ** ಮತದಾರರ ಗುರುತಿನ ಚೀಟಿ **ಅಥವಾ** ಆಧಾರ್ ಕಾರ್ಡ್<br>2) ಅರ್ಜಿ ನಮೂನೆಯಲ್ಲಿ ಸ್ವಯಂ ಘೋಷಿತ ಪತ್ರ<br>**ಕಾರ್ಯ ವಿಧಾನ:**<br>ಗ್ರಾಮಲೆಕ್ಕಿಗರಿಂದ ಕ್ಷೇತ್ರ ಪರಿಶೀಲನೆ ಮಾಡಿದ ವರದಿಯ ಮೇಲೆ ಪ್ರಮಾಣ ಪತ್ರ ವಿತರಿಸುವುದು. |
| 27 | ಬೆಳೆ ದೃಢೀಕರಣ ಪತ್ರ | **ಕಡ್ಡಾಯ ದಾಖಲೆಗಳು:**<br>1) ಪಡಿತರ ಚೀಟಿ **ಅಥವಾ** ಮತದಾರರ ಗುರುತಿನ ಚೀಟಿ **ಅಥವಾ** ಆಧಾರ್ ಕಾರ್ಡ್<br>2) ಪಹಣಿ ಪತ್ರ<br>**ಕಾರ್ಯ ವಿಧಾನ:**<br>ಭೂಮಿ ಆನ್‌ಲೈನ್‌ನಲ್ಲಿ ಪಹಣಿಯನ್ನು ಆಪರೇಟರ್ ವೀಕ್ಷಿಸುವುದು. ಪಹಣಿಯಲ್ಲಿ ಅರ್ಜಿದಾರರ ಹೆಸರು ಇದ್ದಲ್ಲಿ, ಪಹಣಿಯ ಆಧಾರದ ಮೇಲೆ ಒಂದು ದಿನದ ಸೇವೆಯಾಗಿ (ONE DAY SERVICE) ಪ್ರಮಾಣ ಪತ್ರ ವಿತರಿಸುವುದು. ಪಹಣಿಯಲ್ಲಿ ಅರ್ಜಿದಾರರ ಹೆಸರು ಇಲ್ಲದಿದ್ದಲ್ಲಿ, ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡುವುದು ಅಥವಾ ಗ್ರಾಮಲೆಕ್ಕಿಗರಿಂದ ವಂಶವೃಕ್ಷವನ್ನು ಪಡೆಯುವುದು (ಅರ್ಜಿದಾರರಿಂದ ಅಥವಾ ಇಲಾಖೆ ವತಿಯಿಂದ) ಮತ್ತು ಪ್ರಮಾಣ ಪತ್ರ ವಿತರಿಸುವುದು. |